7. ಗಮನ ಸೆಳೆಯುವ ಸೂಚನೆ

ವಿಷಯ: ಕೋಳಿ, ಟೊಕ್ಕೆಕೋಳಿ, ಗಂಗಾಮತ, ತಳವಾರ, ಕಬ್ಬಲಿಗ, ಜಾತಿಗಳನ್ನು ಪರಿಶಿಷ್ಟ ಪಂಗಡ ಪಟ್ಟಿಯಲ್ಲಿ ಸೇರಿಸಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಕಳುಹಿಸಲು ಸರ್ಕಾರ ಮಾಡಿರುವ ನಿರ್ಧಾರದ ಬಗ್ಗೆ.

ಶ್ರೀ ರಾಜು ಅಲಗೂರು (ನಾಗಠಾಣ) : ಮಾನ್ಯ ಅಧ್ಯಕ್ಷರೆ, ಕೋಳಿ, ಟೊಕ್ಕೆಕೋಳಿ, ಗಂಗಾಮತ, ತಳವಾರ, ಕಬ್ಬಲಿಗ, ಜಾತಿಗಳನ್ನು ಪರಿಶಿಷ್ಟ ಪಂಗಡ ಪಟ್ಟಿಯಲ್ಲಿ ಸೇರಿಸಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಕಳುಹಿಸಲು ಸರ್ಕಾರ ಮಾಡಿರುವ ನಿರ್ಧಾರದ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಸಚಿವರ ಗಮನ ಸೆಳೆಯಲು ಬಯಸುತ್ತಿದ್ದೇನೆ. ನಾನು ಕೇಳಿದ್ದು ಪರಿಶಿಷ್ಟ ಪಂಗಡದ ಬಗ್ಗೆ ಆದರೆ ಉತ್ತರದಲ್ಲಿ ಪರಿಶಿಷ್ಟ ಜಾತಿ ಎಂದು ತಪ್ಪಾಗಿದೆ. ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಲು ಏನು ಕ್ರಮ ತೆಗೆದುಕೊಳ್ಳಲಾಗಿದೆ?

ಅಧ್ಯಕ್ಷರು :– ಮಾನ್ಯ ಸಚಿವರು ಉತ್ತರ ಹೇಳುವುದು.

ಶ್ರೀ ಟಿ.ಬಿ.ಜಯಚಂದ್ರ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ನಿಯಮ 73 ರ ಮೇರೆಗೆ ಪ್ರಸ್ತಾಪಿಸಿರುವ ಕೋಳಿ, ಟೊಕ್ಕೆಕೋಳಿ, ಗಂಗಾಮತ, ತಳವಾರ, ಕಬ್ಬಲಿಗ, ಜಾತಿಗಳನ್ನು ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಸೇರಿಸಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಕಳುಹಿಸಲು ಸರ್ಕಾರ ಮಾಡಿರುವ ನಿರ್ಧಾರದ ಬಗ್ಗೆ ಗಮನ ಸೆಳೆದಿದ್ದಾರೆ.

ಶ್ರೀ ರಾಜು ಅಲಗೂರು :– ಪರಿಶಿಷ್ಟ ಜಾತಿ ಅಲ್ಲ. ಪರಿಶಿಷ್ಟ ಪಂಗಡ. ತಪ್ಪಾಗಿ ಪ್ರಿಂಟ್ ಆಗಿದೆ. ದಯಮಾಡಿ ಮಾನ್ಯ ಸಚುವರು ಉತ್ತರದಲ್ಲಿ ಸರಿ ಮಾಡಿ ಉತ್ತರವನ್ನು ನಾಳೆ ಕೊಡಿ ಪರವಾಗಿಲ್ಲ. ಪರಿಶಿಷ್ಟ ಜಾತಿ ಪಟ್ಟಿಗೆ

ಸೇರಿಸುವುದಲ್ಲ. ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಏನು ಕ್ರಮ ಕೈಗೊಳ್ಳಲಾಗಿದೆ ಎಂದು ಕೇಳಲಾಗಿದೆ.

ಶ್ರೀ ವೈ.ಎಸ್ ವಿ ದತ್ತ :– ಮಾನ್ಯ ಸಚಿವರು ಸ್ಪಷ್ಟವಾದಂತಹ ಉತ್ತರವನ್ನು ನೀಡಬೇಕಾಗುತ್ತದೆ.

ಶ್ರೀ ಟಿ.ಬಿ.ಜಯಚಂದ್ರ :– ಮಾನ್ಯ ಅಧ್ಯಕ್ಷರೆ, Subject ನಲ್ಲಿ ತಪ್ಪಾಗಿದೆ. ಆದರೆ ಉತ್ತರದಲ್ಲಿ ಸರಿಯಾಗಿದೆ.

ಕೋಳಿ, ಟೊಕ್ರೆಕೋಳಿ, ಗಂಗಾಮತ, ತಳವಾರ, ಕಬ್ಬಲಿಗ, ಜಾತಿಗಳನ್ನು ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಸೇರಿಸಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಕಳುಹಿಸಲು ಸರ್ಕಾರ ಮಾಡಿರುವ ನಿರ್ಧಾರದ ಬಗ್ಗೆ ಹೇಳಿಕೆ ಈ ರೀತಿ ಇದೆ

ಕೋಳಿ, ಟೊಕ್ರೆಕೋಳಿ, ತಳವಾರ, ಕಬ್ಬಲಿಗ, ಗಂಗಾಮತ ಮತ್ತು ಅದರ ಉಪಜಾತಿಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಸಂಬಂಧ ಕುಲಶಾಸ್ತ್ರೀಯ ಅಧ್ಯಯನ ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ ಸಕಇ 169 ಎಸ್ಎಡಿ 2006 ದಿನಾಂಕ: 08–04–2010ರಲ್ಲಿ ಕರ್ನಾಟಕ ವಿಶ್ವ ವಿದ್ಯಾಲಯ, ಹಂಪಿ, ಇವರಿಗೆ ವಹಿಸಿ ಆದೇಶಿಸಲಾಗಿದೆ.

ಕುಲಸಚಿವರು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಇವರು ಕುಲ ಶಾಸ್ತ್ರೀಯ ಅಧ್ಯಯನ ವರದಿಯನ್ನು ನಿರ್ದೇಶಕರು, ಕರ್ನಾಟಕ ರಾಜ್ಯ ಗಿರಿಜನ ಸಂಶೋಧನಾ ಸಂಸ್ಥೆ, ಇವರಿಗೆ ದಿನಾಂಕ : 12–09–2013 ರಂದು ಸಲ್ಲಿಸಿರುತ್ತಾರೆ. ಸದರಿ ವರದಿಯ ಕುರಿತು ತಜ್ಞರ ಸಮಿತಿಯ ಅಭಿಪ್ರಾಯ ಆಳವಡಿಸಿ ಸಲ್ಲಿಸಲು ಸೂಚಿಸಲಾಗಿರುತ್ತದೆ, ಅವರಿಂದ ಅಂತಿಮ ವರದಿ ಸ್ವೀಕೃತವಾದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು

ಅಧ್ಯಕ್ಷರು :– ಸರಿಯಾಗಿ ಅರ್ಥವಾಗಲಿಲ್ಲ.

ಶ್ರೀ ಟಿ.ಬಿ.ಜಯಚಂದ್ರ :– ಕುಲಶಾಸ್ತ್ರೀಯ ಅಧ್ಯಯನಕ್ಕೋಸ್ಕರ ಹಂಪಿ ವಿಶ್ವವಿದ್ಯಾಲಯದ experts ಗೆ ಮನವಿಯನ್ನು ಕೊಟ್ಟಿದ್ದಾರೆ ಅದು ಪರಿಶಿಷ್ಟ ಜಾತಿ ಅಲ್ಲ. ಪರಿಶಿಷ್ಟ ಪಂಗಡ. ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಬಗ್ಗೆ ದಿನಾಂಕ

12.09.2013 ರಂದು ಅಧ್ಯಯನ ಸಮಿತಿಯ ಅಭಿಪ್ರಾಯ ಬಂದಿದೆ. ಅದರ ಬಗ್ಗೆ ಅಂತಿಮ ವರದಿಯ ಸ್ವೀಕೃತಿಯಾದ ಮೇಲೆ ಮುಂದಿನ ದಿನಗಳಲ್ಲಿ ಕ್ರಮ ಕೈಗೊಳ್ಳುತ್ತೇವೆ. ಅದು ಸರ್ಕಾರಕ್ಕೆ ಬರಬೇಕಾಗುತ್ತದೆ. ಈ ವಿಚಾರದಲ್ಲಿ ಅದು ಸಚಿವ ಸಂಪುಟದಲ್ಲಿ ಬಂದು ಅನುಮೋದನೆ ಆಗಬೇಕಾಗುತ್ತದೆ. ಪ್ರಸ್ತಾವನೆ ಇನ್ನೂ ಇಲಾಖೆಯ ಮಟ್ಟದಲ್ಲಿದೆ ಅದನ್ನು ಆದಷ್ಟು ಬೇಗ ತರಿಸಿ ಕ್ರಮ ಕೈಗೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು :– ಇದು Official committee ಯಿಂದ ಬಂದಿದೆಯೇ?

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೆ, ಹೌದು ಕುಲ ಶಾಸ್ತ್ರೀಯ ಅಧ್ಯಯನ ಎಂದು ಹೇಳಿ.

ಅಧ್ಯಕ್ಷರು :– ಮಾನ್ಯ ಸದಸ್ಯರಾದ ಚಿಕ್ಕಮಾದುರವರು ಇಲ್ಲಿಯೇ ಇದ್ದಾರೆ. ನಿಮ್ಮ ಜಾತಿ ತಳವಾರರೇ ಅಥವಾ ನಾಯಕರೇ?

ಶ್ರೀ ಟಿ.ಬಿ. ಜಯಚಂದ್ರ :– ಯಾವುದೇ ವಿಚಾರದ ಬಗ್ಗೆ ಸರ್ಕಾರದ ಮುಂದೆ ಪ್ರಸ್ತಾಪವಾದಾಗ ಕುಲಶಾಸ್ತ್ರೀಯ ಅಧ್ಯಯನದಿಂದ ವರದಿಯನ್ನು ತರಿಸಿಕೊಂಡು ವಾಸ್ತವಿಕವಾಗಿ ಇರುವಂತಹ, ವೈಜ್ಞಾನಿಕವಾಗಿರುವಂತಹ ಮಾಹಿತಿಗಳ ಮೇಲೆಯೇ ಇದನ್ನು ಇಲಾಖೆಯು ಮಾಡುತ್ತದೆ. ಇದು ಇನ್ನೂ ಇಲಾಖೆಯ ಮಟ್ಟದಲ್ಲಿಯೇ ಇದೆ.

ಅಧ್ಯಕ್ಷರು :– ಬಂದಿದೆ, ಅದು ಇನ್ನೂ ಪರಿಶೀಲನೆಯಲ್ಲಿದೆ.

ಶ್ರೀ ಟಿ.ಬಿ. ಜಯಚಂದ್ರ :– ಅದು ಇನ್ನೂ process ನಲ್ಲಿದೆ. ಆದಷ್ಟು ಬೇಗನೆ ಸರ್ಕಾರವು ಈ ಬಗ್ಗೆ ಅಂತಿಮ ಹಾಕಬೇಕು ಬೇಗ ಇದನ್ನು ಇತ್ಯರ್ಥ ಮಾಡಬೇಕೆಂಬ ಸೂಚನೆಯನ್ನು ಇಲಾಖೆಗೆ ಕೊಡುತ್ತೇವೆ.

ಶ್ರೀ ಎಸ್.ಚಿಕ್ಕಮಾದು : ಈ ಬಗ್ಗೆ ಸರ್ಕಾರವು ಆದಷ್ಟು ಬೇಗನೆ ವರದಿಯನ್ನು ತರಿಸಿಕೊಳ್ಳಬೇಕು

ಅಧ್ಯಕ್ಷರು :– ಒಪ್ಪಿಗೆಯ ಬಗ್ಗೆ ಅವರು ಹೇಳಲಿಲ್ಲ ಆದಷ್ಟು ಬೇಗನೆ ಇದನ್ನು ಶೀಘ್ರವಾಗಿ ಪರಿಶೀಲನೆಯನ್ನು ಮಾಡುತ್ತೇನೆ ಎಂದು ಹೇಳಿದ್ದೀರಿ, ಹೌದೇ?

ಶ್ರೀ ಟಿ.ಬಿ. ಜಯಚಂದ್ರ :– ಹೌದು

ಶ್ರೀ ರಾಜು. ಅಲಗೂರು : ಮಾನ್ಯ ಅಧ್ಯಕ್ಷರೆ. ಕುಲಶಾಸ್ತ್ರೀಯ ಅಧ್ಯಯನದ ಬಗ್ಗೆ ಈಗಾಗಲೇ ಹಂಪಿ ವಿಶ್ವವಿದ್ಯಾಲಯಕ್ಕೆ ಅವರು ಅಧ್ಯಯನ ಮಾಡಿ ಅಧ್ಯಯನದ ವರದಿಯನ್ನು ಸಂಬಂಧಪಟ್ಟ ನಿರ್ದೇಶಕರಿಗೆ ಹೋಗಿ ಕೆಲವು ನ್ಯೂನ್ಯತೆಗಳನ್ನು ಬರೆದು ಪುನಃ ಹಂಪಿ ವಿಶ್ವವಿದ್ಯಾಲಯಕ್ಕೆ ಕಳುಹಿಸಿ ದ್ದಾರೆ ಅದು ಇನ್ನೂ ವಾಪಸ್ಸು ನಿರ್ದೇಶನಾಲಯಕ್ಕೆ ಹೋಗಿಲ್ಲ. ಆದಷ್ಟು ಬೇಗ ಆ ವರದಿಯನ್ನು ನಿರ್ದೇಶಕರಿಂದ ತರಿಸಿಕೊಂಡು ಸರ್ಕಾರಕ್ಕೆ ಕಳುಹಿಸಿ ಈ ಬಗ್ಗೆ ಬೇಗನೆ ತೀರ್ಮಾನವಾಗಬೇಕಾಗಿದೆ ಎಂದು ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು :– ಮಾನ್ಯ ಸಚಿವರೆ, ಮಾನ್ಯ ಸದಸ್ಯರು clarification ಕೇಳುತ್ತಿದ್ದಾರೆ, ಉತ್ತರ ಹೇಳಿ.

ಶ್ರೀ ಟಿ.ಬಿ.ಜಯಚಂದ್ರ :– ಮಾನ್ಯ ಸದಸ್ಯರೆ, ತಾವು ಇನ್ನೊಂದು ಸಾರಿ ಹೇಳಿ.

ಶ್ರೀ ರಾಜು ಅಲಗೂರು : ಕುಲಶಾಸ್ತ್ರೀಯ ಅಧ್ಯಯನ ಮಾಡುವುದಕ್ಕೆ ತಾವು ಹಂಪಿ ವಿಶ್ವವಿದ್ಯಾಲಯಕ್ಕೆ ಒಂದು ವರದಿಯನ್ನು ಕೇಳಿದ್ದೀರಿ. ಅಧ್ಯಯನ ವರದಿಯು ಈಗಾಗಲೇ ಸಂದಂಧಪಟ್ಟ ನಿರ್ದೇಶಕರಿಗೆ ಹೋಗಿತ್ತು. ಪುನಃ ನಿರ್ದೇಶಕರು ಕೆಲವು ನ್ಯೂನ್ಯತೆಗಳನ್ನು ಕಂಡುಹಿಡಿದು ವಾಪಸ್ಸು ಹಂಪಿ ವಿಶ್ವ ವಿದ್ಯಾಲಯಕ್ಕೆ ಕಳುಹಿಸಿ ಮತ್ತೊಂದು ವರದಿಯನ್ನು ಕೇಳಿದ್ದಾರೆ. ಆ ವರದಿಯು ಇನ್ನೂ ಕೂಡ ನಿರ್ದೇಶಕರಿಗೆ ಬಂದಿರುವುದಿಲ್ಲ. ವರದಿಯನ್ನು ಬೇಗನೇ ತರಿಸಿಕೊಂಡು ಸರ್ಕಾರವು ಈ ಬಗ್ಗೆ ತೀರ್ಮಾನ ಮಾಡಿ ಸಂಪುಟ ದಲ್ಲಿ ಈ ಬಗ್ಗೆ ತೀರ್ಮಾನ ಮಾಡಿ ಶಿಫಾರಸ್ಸು ಮಾಡಿ ಕೇಂದ್ರ ಸರ್ಕಾರಕ್ಕೆ

ಕಳುಹಿಸಬೇಕೆಂಬ ವಿನಂತಿಯನ್ನು ನಾನು ತಮ್ಮ ಮುಖಾಂತರ ಮಾಡಿ ಕೊಳ್ಳುತ್ತಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ :– ಮಾನ್ಯ ಅಧ್ಯಕ್ಷರೆ, ಈ ರೀತಿಯಾದಂತಹ ಮನವಿಗಳು ಸಾಕಷ್ಟು ಇದೆ. ಕುಲಶಾಸ್ತ್ರೀಯ ಅಧ್ಯಯನದ ವೈಜ್ಞಾನಿಕ ವಾದಂತಹ ವರದಿ ಬಂದ ಮೇಲೆಯೇ ಮುಂದಿನ ಪ್ರಕ್ರಿಯೆಯು ಪ್ರಾರಂಭ ವಾಗುತ್ತದೆ. ಈಗಾಗಲೇ ಇದು ಹಂಪಿ ವಿಶ್ವವಿದ್ಯಾಲಯದ ಮಟ್ಟದಲ್ಲಿಯೇ ಇದೆ ಎನ್ನುವಂತಹ ಮಾತನ್ನು ಹೇಳಿದ್ದೇನೆ. ಆದಷ್ಟು ಬೇಗನೆ ಈ ಬಗ್ಗೆ ತಗಾದೆ ಮಾಡಿ ವರದಿಯನ್ನು ತರಿಸತಕ್ಕಂತಹದ್ದನ್ನು ಮಾಡುತ್ತೇವೆ.

ಅಧ್ಯಕ್ಷರು :– ಮುಂದೆಯೂ ಇದೆ. ನಾಯಕರು, ನಾಯಕರ ಮಕ್ಕಳ ಎಂದು ಇದೆ, ಇದರಲ್ಲಿ ತಳವಾರರೂ ಸೇರಿದ್ದಾರೆ.

ಶ್ರೀ ಎಸ್ ಚಿಕ್ಕಮಾದು : ಮಾನ್ಯ ಸಚಿವರು ಹೇಳಿರುವುದು correct ಇದೆ. ಆ ವರದಿಯನ್ನು ಆದಷ್ಟು ಬೇಗನೆ ಶಿಫಾರಸ್ಸು ಮಾಡಿ ಕಳುಹಿಸಿಕೊಡಿ.

ಶ್ರೀ ಟಿ.ಬಿ.ಜಯಚಂದ್ರ :– ವರದಿಯನ್ನು ಆದಷ್ಟು ಬೇಗನೆ ತರಿಸು ವಂತಹ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ.ಎ.ಮೊಹಿದ್ದೀನ್ ಬಾವಾ :– ಮಾನ್ಯ ಅಧ್ಯಕ್ಷರೆ, ಕುಡುಬಿ ಸಮುದಾಯದ್ದು ಅದರ ಕೊತೆಯಲ್ಲಿಯೇ ವರದಿಯನ್ನು ಸಲ್ಲಿಸಿದ್ದೇವೆ. ಅದರ ಬಗ್ಗೆಯೂ ಆದಷ್ಟು ಬೇಗನೆ ಕಳುಹಿಸಿಕೊಡಬೇಕು

ಅಧ್ಯಕ್ಷರು : ಕುಡುಬಿ ಸಮುದಾಯದ ಬಗ್ಗೆ ಇಲ್ಲಿ ಬಂದಿರುವುದಿಲ್ಲ. ಬೇರೆ ರೂಪದಲ್ಲಿ ಸಲ್ಲಿಸಿ. ಶ್ರೀ ಎಸ್.ಎನ್.ಸುಬ್ಬಾರೆಡ್ಡಿಯವರ ಗಮನ ಸೆಳೆ ಯುವ ಸೂಚನೆ ಇದೆ. ಅವರು ಸದನದಲ್ಲಿ ಇಲ್ಲ.

ಈಗ ನಾನು ಮತ್ತೊಮ್ಮೆ ಶ್ರೀಮಾನ್ ಯಡಿಯೂರಪ್ಪನವರಲ್ಲಿ ಇಡೀ ಸದನದ ಪರವಾಗಿ ವಿನಂತಿ ಮಾಡಿಕೊಳ್ಳತ್ತಿದ್ದೇನೆ. ದಯವಿಟ್ಟು ತಮ್ಮ ಧರಣಿ ವನ್ನು ಕೈಬಿಟ್ಟು ತಮ್ಮ ಸ್ಥಳಕ್ಕೆ ಹೋಗಬೇಕು. ಸದನದ ಕಲಾಪದಲ್ಲಿ ತಾವು ಭಾಗವಹಿಸಬೇಕು. ನಾಳೇ ಚರ್ಚೆಗೆ ಬರುತ್ತದೆ. ತಾವು ದಯವಿಟ್ಟು ಚರ್ಚೆ

ಯಲ್ಲಿ ಭಾಗವಹಿಸಿ ವಿಷಯವನ್ನು ಪ್ರಸ್ತಾಪ ಮಾಡಬೇಕು. ಮೇಲಾಗಿ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಎದುರಿಗೆ ಹೇಳಿದ್ದಾರೆ. ಆದಾಗ್ಯೂ ನೀವು ನಿಮ್ಮ ಬೇಡಿಕೆ ಮತ್ತು ಒತ್ತಾಯವಿದೆ, ಆ ಒತ್ತಾಯವನ್ನು ಇನ್ನೂ ವಿಸ್ತಾರವಾಗಿ ಸದನದ ಮುಂದೆ ಪ್ರಸ್ತಾಪ ಮಾಡಿದರೆ ಸದನವೂ ಕೂಡ ಅದಕ್ಕೆ ತನ್ನ ಸಮಿತಿ ಯನ್ನು ನೀಡುತ್ತದೆ. ಆ ದೃಷ್ಟಿಯಿಂದ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ದಯವಿಟ್ಟು ನಮ್ಮ ಮನವಿಯನ್ನು ತಾವು ಆತ್ಮೀಯತೆಯಿಂದ ಸ್ವೀಕಾರ ಮಾಡ ಬೇಕು. ಮಾನ್ಯ ಯಡಿಯೂರಪ್ಪನವರೆ, ಏನಾದರೂ ಹೇಳಿ. ಈಗ ಚರ್ಚೆ ಬೇಡವೇ? ನಾಳೆ ತೆಗೆದುಕೊಳ್ಳೋಣವೇ? ಮಾನ್ಯ ಜಗದೀಶ್ ಶೆಟ್ಟರ್‌ರ ವರದ್ದೂ ಇದೆ. ಹಾಗಾದರೆ ಇಲ್ಲಿ ಚರ್ಚೆ ಮಾಡುವವರು ಯಾರು? ಇನ್ನು ಒಂದು ಗಂಟೆ ಕಾಲ ಕುಳಿತುಕೊಂಡು ಬೇಕಾದರೆ ಚರ್ಚೆ ಮಾಡೋಣ. ಶ್ರೀ ಗೋವಿಂದ ಕಾರಜೋಳರವರೆ, ತಾವು ಕಬ್ಬು ಬೆಳೆಗಾರರ ಬಗ್ಗೆ ಮಾತನಾಡುತ್ತೀರಾ?

8. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ

ವಿಷಯ :– ಕಬ್ಬು ಬೆಳೆಗೆ ಬೆಲೆ ನಿಗಧಿಪಡಿಸುವ ಬಗ್ಗೆ

ಶ್ರೀ ಗೋವಿಂದ ಎಂ.ಕಾರಜೋಳ (ಮುಧೋಳ) :–ಮಾನ್ಯ ಅಧ್ಯಕ್ಷರೆ, ಕಬ್ಬು ಬೆಳೆಗಾರರ ಸಮಸ್ಯೆ ಇಂದು ಮತ್ತು ನಿನ್ನೆಯದಲ್ಲ. ಪ್ರತಿ ವರ್ಷವೂ ಕೂಡ ಕಬ್ಬು ಬೆಳೆಗಾರರು ತಾವು ಬೆಳೆದಂತಹ ಬೆಳೆಗೆ ವೈಜ್ಞಾನಿಕವಾದಂತಹ ಬೆಲೆಯನ್ನು ಕೊಡಬೇಕೆಂದು ಹೇಳಿ ಕಳೆದ 40 ವರ್ಷಗಳಿಂದ ಹೋರಾಟ ವನ್ನು ಮಾಡುತ್ತಿದ್ದಾರೆ. ಈ ಹೋರಾಟವನ್ನು ಕೊನೆಗಾಣಿಸಬೇಕು, ಪ್ರತಿ ವರ್ಷವೂ ಕೂಡ ರೈತರು ಬೀದಿಗೆ ಬದಬಾರದು ಎಂದು ಹೇಳಿ ಕಳೆದ ವರ್ಷ SAP ಕಾನೂನನ್ನು ಜಾರಿಗೆ ತರುವಂತಹ ವ್ಯವಸ್ಥೆಯನ್ನು ಮಾಡಲಾಗಿದೆ. SAP ಕಾನೂನಿನಲ್ಲಿ ಇರುವಂತಹ ಅವಕಾಶವೇನೆಂದರೆ, ಹಂಗಾಮು ಪ್ರಾರಂಭ ವಾಗುವುದಕ್ಕಿಂತಲೂ ಮುಂಚೆ ಸಭೆ ಕರೆದು ವೈಜ್ಞಾನಿಕವಾದಂತಹ ಬೆಲೆಯನ್ನು